**ವ್ಯಾಖ್ಯಾನ**

# ಅಚ್ಯುತನ ಭಕುತರಿಗೆ ಮೆಚ್ಚದವನು ಪಾಪಿ

**ಅಚ್ಯುತನ ಭಕುತರಿಗೆ ಮನ**
**ಮೆಚ್ಚದವನು ಪಾಪಿ**
**ಆನರನೊಳ್ ಆಡಿ ನೋಡಿ ನುಡಿಯೆ**
**ಮನುಜವೇಷದ ರಕ್ಕಸನೋಳ್ ಆಡಿನುಡಿದಂತೆ**
**ಸಚ್ಚಿದಾನಂದಾತ್ಮ ಪುರಂದರ ವಿಠಲನು**
**ಮೆಚ್ಚನು ಮೆಚ್ಚನು ಕಾಣೊ ಎಂದೆಂದಿಗೂ.**

ಹರಿದಾಸ ಸಾಹಿತ್ಯದ ಮೂಲ ವೇದೋಪನಿಷತ್ತಗಳು ಮತ್ತು ಪುರಾಣೇತಿಹಾಸಗಳು.

ಈ ಗ್ರಂಥಗಳು ಜೀವರಿಗೆ ವಿಧಿನಿಷೇಧಗಳನ್ನು ಹೇಳುತ್ತವೆ.
ಅವುಗಳನ್ನು ನಾನಾ ರೀತಿಯಿಂದ ತಿಳಿಸುತ್ತವೆ.

ವಿಧಿಗಳನ್ನು ಹೇಳುವಾಗ ಕೆಲವೊಮ್ಮೆ ನೇರವಾಗಿ ಈ ರೀತಿ ಆಚರಿಸು ಎಂದು ಆಜ್ಞೆ ಮಾಡಿದಂತೆ ಇರುತ್ತವೆ.
ಕೆಲವೊಮ್ಮೆ ಆ ರೀತಿ ಆಚರಿಸಿ ಲಾಭ ಪಡೆದ ಭಕ್ತರ ಕಥೆ ಹೇಳುವ ಮೂಲಕ ನೀನು ಈ ರೀತಿಯ ಫಲ ಬಯಸುವುದಾದರೆ ಹೀಗೆ ಮಾಡು ಎನ್ನುವಂತಿರುತ್ತದೆ.

ಅದರಂತೆಯೇ ನಿಷಿದ್ಧ ಕರ್ಮಗಳನ್ನೂ ಕೂಡ ನೇರವಾಗಿ ಮಾಡಬೇಡ ಎಂದೇ ಹೇಳಿದ್ದು ಇದೆ. ಮತ್ತು ಈ ರೀತಿ ನಡೆದುಕೊಂಡವರಿಗಾದ ದುರ್ಗತಿಗಳನ್ನು ಹೇಳಿ, ನೋಡು ಈ ರೀತಿ ನೀನಾದರೆ ನಿನಗೂ ಇದೇ ರೀತಿ ಅನರ್ಥವಾಗುವುದು ಎಂದು ನೇರವಾಗಿ ಹೇಳದಿದ್ದರೂ ಆ ಆಂತರ್ಯವಿರುತ್ತದೆ.

ಇನ್ನು ಇನ್ನೊಂದು ರೀತಿ ಸುದ್ದಿ ಹೇಳುವ ವರ್ತಮಾನ ಪತ್ರದಂತೆ, ಹೇಳಿಕೆಗಳಿರುತ್ತವೆ.

ಗಾದೆ ಮಾತುಗಳಂತೆ.

ಹೀಗಾದರೆ ಹೀಗಾಗುತ್ತದೆ ಎಂದು.

ಅಂಥದೇ ಸಾಲುಗಳು ಶ್ರೀ ಪುರಂದರ ದಾಸರ ಈ ಉಗಾಭೋಗದ ಸಾಲುಗಳು.

ದೇವರ ಭಕ್ತರಲ್ಲಿ ದ್ವೇಷ ಮಾಡುವವನು ಪಾಪಿಷ್ಟ. ಅವನು ರಕ್ಕಸನಿದ್ದಂತೆ ಅವರನ್ನು ಭಗವಂತ ಮೆಚ್ಚುವುದಿಲ್ಲ. ಅಂಥವರ ಸಂಗ ಮಾಡುವವರೂ ಕೂಡ ಅವರಂತೆಯೇ ದೇವರ ಅವಜ್ಞೆಗೆ ಪಾತ್ರರಾಗುತ್ತಾರೆ.

ಎನ್ನುವುದು ಈ ಸಾಲುಗಳ ತಾತ್ಪರ್ಯ.

ಉಗಾಭೋಗ ಚಿಕ್ಕದಾದರೂ ಕೃಷ್ಣನ ಪುಟ್ಟ ಬಾಯಿ ಬ್ರಹ್ಮಾಂಡವನ್ನೇ ಅಡಗಿಸಿಟ್ಟು ಕೊಂಡಂತಿದೆ. ದಾಸರ ಈ ಹೇಳಿಕೆಯಲ್ಲಿ ಎಷ್ಟೆಲ್ಲ ತತ್ವಗಳು ಅಡಗಿವೆ.

ಮೊಟ್ಟಮೊದಲ ವಿಷಯ ಎಲ್ಲ ಜೀವರೂ ಬಯಸುವ ಸದಾ ಸುಖ ಸಿಗುವುದು (ಮೋಕ್ಷ) ಅಚ್ಯುತನ ಅನುಗ್ರಹದಿಂದ ಮಾತ್ರ.

" *

**" ಯಮೇವೈಷ ವೃಣೀತೇ ತೇನ ಲಭ್ಯಸ್ತಸ್ಯೈಷ ಆತ್ಮಾ ವಿವೃಣುತೇ ತನೂಂ ಸ್ವಾಂ/......."**

ಎಂಬ ಕಾಠಕ ಶೃತಿಯು ತಿಳಿಸುವಂತೆ-
ಪರಮಾತ್ಮನು ಯಾರನ್ನು ತನ್ನ ಭಕ್ತನೆಂದು ಅನುಗ್ರಹಿಸುತ್ತಾನೋ ಅವನಿಗೆ ತನ್ನ ಸ್ವರೂಪವನ್ನು ಪ್ರಕಟಮಾಡುತ್ತಾನೆ.

**ವಿಷ್ಣುರ್ಹಿ ದಾತಾ ಮೋಕ್ಷಸ್ಯ ....."*** ಎಂಬ ವಾಕ್ಯವಿರುವುದರಿಂದ
ಅವನ ಅನುಗ್ರಹ ಅತೀ ಅವಶ್ಯವಾದದ್ದು.

ಶ್ರೀಹರಿಯು ತನ್ನ ಭಕ್ತರನ್ನು ನಿಂದಿಸುವವರನ್ನು ಎಂದಿಗೂ ಮೆಚ್ಚುವುದಿಲ್ಲ.

ಶ್ರೀ ಜಗನ್ನಾಥ ದಾಸರು ಹರಿಕಥಾಮೃತಸಾರದ ಕರುಣಾಸಂಧಿಯಲ್ಲಿ ಹೀಗೆ ಹೇಳುತ್ತಾರೆ--

**"ತಾಳ ತನ್ನವರಲ್ಲಿ ಮಾಡುವ ಹೇಳನವ ಹೆದ್ದೈವ ವಿದುರನ ಆಲಯದಿ ಪಾಲುಂಡು ಕುರುಪನ ಮಾನವನೆ ಕೊಂಡ "** - ಎಂದು.

ಶ್ರೀ ಕೃಷ್ಣನು ಸಂಧಾನಕ್ಕೆಂದು ಹಸ್ತಿನಾವತಿಗೆ ಹೋದಾಗ ತನ್ನ ಭಕ್ತರಾದ ಪಾಂಡವರನ್ನು ದ್ವೇಷಿಸುವ ದುರ್ಯೋಧನನ ಮನೆಗೆ ಹೋಗಲಿಲ್ಲ, ಅಷ್ಟೇ ಅಲ್ಲ ಅವನ ಕಾರ್ಯಕ್ಕೆ ಸಮ್ಮತಿಸಿದ ಭೀಷ್ಮ ದ್ರೋಣಾದಿಗಳ ಮನೆಗೂ ಹೋಗಲಿಲ್ಲ.

ಈ ಉಗಾಭೋಗದಲ್ಲಿಯಾದರೂ ದಾಸರಾಯರು ಇದನ್ನೇ ಹೇಳುತ್ತಿದ್ದಾರೆ.
ಹರಿಭಕ್ತರ ದ್ವೇಷ ಮಾಡುವವನು ಪಾಪಿ ಅವನ ಸಹವಾಸದಲ್ಲಿರುವವರನ್ನೂ ಭಗವಂತ ಮೆಚ್ಚಲಾರ ಎಂದು.

ಆದ್ದರಿಂದ ಭಗವದ್ಭಕ್ತರ ದ್ವೇಷವನ್ನು ಎಂದೆಂದಿಗೂ ಮಾಡಬಾರದು. ಅಷ್ಟೇ ಅಲ್ಲ ಹಾಗೆ ಮಾಡುವವರ ಸಂಗವನ್ನೂ ವರ್ಜಿಸಬೇಕು, ವಿದುರನಂತೆ.

ಎನ್ನುವುದು ದಾಸರ ಆಶಯ ಎನಿಸುತ್ತದೆ.

ದಾಸರು ಮಹಾ ಜ್ಞಾನಿಗಳು ಅವರು ಒಂದಕ್ಷರ ನುಡಿತಾರೆ ಅಂದರೆ ಅದರ ಹಿಂದೆ ಸಾಕಷ್ಟು ತತ್ವಗಳಿರುತ್ತವೆ.

ನಾನು ನನ್ನ ಅಲ್ಪ ಮತಿಗೆ ತೋಚಿದಷ್ಟು ಬರೆಯುವ ಪ್ರಯತ್ನ ಮಾಡಿದ್ದೇನೆ.

ಆ ಪ್ರಯತ್ನವನ್ನೂ ಆ ದಾಸರ ಅಂತರ್ಯಾಮಿ ಶ್ರೀ ಹರಿಯೇ ಮಾಡಿಸಿದ್ದು.

**ಶ್ರೀ ಕೃಷ್ಣಾರ್ಪಣಮಸ್ತು**

**ಲೇಖಕರು:** ಸೌ. ಚೇತನಾ ವಾಮನರಾವ ಕುಲಕರ್ಣಿ, ವಿಜಯಪುರ.